ಶ್ರೀ ಎಂ ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೇ, ಕೆಲವಾರು ಪುರಸಭೆಗಳನ್ನು ಜಲಮಂಡಲಿಗೆ ವಹಿಸಿಕೊಟ್ಟಿದೆ. ಆದರೆ ಗುಳೇದಗುಡ್ಡದ ಮುನಿಸಿಪಾಲಿಟಿಯನ್ನು ಜಲಮಂಡಲಿಗೆ ವಹಿಸಿಕೊಡಬೇಕಾದರೆ ಅವರು ಕೆಲವು ಪರತ್ತುಗಳಿಗೆ ಬದ್ಧರಾಗಿರಬೇಕಾಗುತ್ತದೆ. ಆದರೆ ಈಗ ಆ ಮುನಿಸಿಪಾಲಿಟಿಯವರು ಸುಮಾರು ೭ ೮೫ ಲಕ್ಷ ರೂಪಾಯಿಗಳನ್ನು ಸರ್ಕಾರಿ ಜೀವ ವಿಮಾಗೆ ಕೊಡಬೇಕು. ಅದನ್ನು ಅವರು ಕೊಟ್ಟಿಲ್ಲ. ಗ್ರಾಮಾಂತರ ಪ್ರದೇಶಗಳಿಂದ ಸುಮಾರು ೩೦ ಲಕ್ಷ ರೂಪಾಯಿಗಳು ವಂತಿಗೆ ವಸೂಲಿ ಮಾಡಬೇಕು. ಅದನ್ನೂ ಸಹ ಮಾಡಿ ಕೊಟ್ಟಿಲ್ಲ. ಇನ್ನೂ ಅನೇಕ ಸಾಲವನ್ನು ಆ ಮುನಿಸಿಪಾಲಿಟಿಯವರು ಕೊಡಬೇಕು ಆ ಎಲ್ಲಾ ಸಾಲಗಳನ್ನು ಸರ್ಕಾರಕ್ಕೆ ಕೊಟ್ಟರೆ, ಆಗ ಮುಂದಿನ ಯೋಚನೆ ಮಾಡ ಬಹುದು.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಸ್ವಾಮಿ ಸರ್ಕಾರದಿಂದ ಮುನಿಸಿಪಾಲಿಟಿಯವರಿಗೆ ಗ್ರಾಂಟ್ ಸರಿಯಾಗಿ ಕೊಟ್ಟರೆ ನಾವೂ ಸಹ ಸರ್ಕಾರಿ ಸಾಲ ಕೊಡಬಹುದು. ತಾವು ಗ್ರಾಂಟ್ ಸರಿಯಾಗಿ ಕೊಡುತ್ತಿಲ್ಲ.

ಶ್ರೀ ಸಿ. ಚಂದ್ರಶೇಖರ್.— ಸ್ವಾಮಿ, ನಾವು ಎಷ್ಟು ಗ್ರಾಂಟ್ ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಗ್ರಾಂಟ್ ಕೊಟ್ಟಿದ್ದೇವೆ. ಮತ್ತೆ ಎಷ್ಟು ಪರಿಹಾರ ಧನವನ್ನು ಕೊಡಬೇಕೋ ಅಷ್ಟು ಕೊಟ್ಟಿದ್ದೇವೆ. ಮುನಿಸಿಪಾಲಿಟಿಯವರು ತಮ್ಮ ತಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು, ಮತ್ತು ಹೆಚ್ಚು ಹೆಚ್ಚು ಉತ್ಪಾದನೆಯನ್ನೂ ಸಹ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನಮಗೂ ಕಷ್ಟವಾಗುತ್ತದೆ ನಿಮಗೂ ಕಷ್ಟವಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಕೊಡತಕ್ಕಂಥ ಗ್ರಾಂಟ್ ಬಹಳ ಕಡಿಮೆ. ಇವರು ಕೊಡತಕ್ಕಂಥ ಗ್ರಾಂಟ್ ಸಾಕಾಗುವುದಿಲ್ಲ. ಮುನಿಸಿಪಾಲಿಟಿಯವರಿಗೆ ಸರಿಯಾಗಿ ತಾವು ಹಣವನ್ನು ಕೊಡದಿದ್ದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಕುಡಿಯುವ ನೀರು ಒದಗಿಸಿ ಕೊಡದಿದ್ದರೆ ಇದರಿಂದ ಕೂಡ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ೭ ಲಕ್ಷ ರೂಪಾಯಿಗಳ ಕುಡಿಯುವ ನೀರಿನ ಯೋಜನೆ ಏನು ಇದೆ ಅದನ್ನು ತಾವು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರು ಸರಬರಾಜು ಮಾಡುವು ದಕ್ಕೆ ನಾನು ಅದಷ್ಟು ಪ್ರಯತ್ನ ಮಾಡುತ್ತೇವೆ. ಆದರೆ ಕೆಲವು ಮುನಿಸಿಪಾಲಿಟಿಗಳಿಂದ ಬರಬೇಕಾದಂಥ ಹಣ ಬರುತ್ತಿಲ. ಆದ್ದರಿಂದ ನಾವು ಹಣವಿಲ್ಲದೆ ಏನೂ ಮಾಡುವುದಕ್ಕೆ ಆಗುವುದಿಲ್ಲ, ಅವರು ಕೊಡ ತಕ್ಕಂಥ ಬಾಕಿಯನ್ನು ಕೊಟ್ಟರೆ ನಾವು ಮುಂದೆ ಯೋಚನೆ ಮಾಡಬಹುದು ಅವರು ಕೊಡತಕ್ಕಂಥ ಬಾಕಿಯನ್ನು ಕೊಡದಿದ್ದರೆ ಜಲ ಮಂಡಲಿಯವರು ಒಪ್ಪುವುದಿಲ್ಲ.

ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರಿ ಸಂಘಗಳಿಗೆ ಸರ್ಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡುವುದು.

೬೪. ಶ್ರೀ ಎಸ್. ಎಸ್. ಪಾಟೀಲ್ (ಬೆಳಗಿ) ಹಾಗೂ ಬಿ ಬಿ. ಚಿಮ್ಮನಕಟ್ಟಿ (ಬಾದಾಮಿ).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸರ್ಕಾರದವರು ರಾಜ್ಯದಲ್ಲಿಯ ನೂತನವಾಗಿ ಚುನಾಯಿಸಲ್ಪಟ್ಟ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಮೇಲೆ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡಿರುವರೇ ?

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಆಯಾ ಸಮಿತಿಗಳ ಮೇಲೆ ನಿಯಮಿಸಿದ ಸದಸ್ಯರುಗಳು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) .—

ಅ) ಹೌದು.

ಆ) ಇದಕ್ಕೆ ಲಗತ್ತಿಸಿದ ಪಟ್ಟಿಯಲ್ಲಿ ವಿವರಿಸಲಾಗಿದೆ.

ಅನುಬಂಧ

ರಾಜ್ಯದಲ್ಲಿಯ ವ್ಯಾಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಮೇಲೆ ನೇಮಕ ಮಾಡಿರುವ ಅಧಿಕಾರೇತರ ಸದಸ್ಯರುಗಳ ಹೆಸರುಗಳನ್ನು ತೋರಿಸುವ ಪಟ್ಟಿ.

(೧೨-೮-೧೯೮೩ ರವರೆಗೆ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಹೆಸರು		ಸದಸ್ಯರುಗಳ ಹೆಸರು
೧	೨	೩		೪
				ಶ್ರೀಯುತರುಗಳು
	ಬೆಂಗಳೂರು ಜಿಲ್ಲೆ	ಚನ್ನಪಟ್ಟಣ	೧.	ಸಿ. ಕೃಷ್ಣಪ್ಪ, ತಂದೆ ಚಿಕ್ಕಪುಟ್ಟಯ್ಯ, ಬೆಂಗಳೂರು–ಮೈಸೂರು ರಸ್ತೆ, ಬೆಂಗಳೂರು ಜಿಲ್ಲೆ
			೨.	ಎಸ್. ಸಿದ್ದಯ್ಯ (ಎಸ್ಸಿ) ಎಕ್ಸ್ ಟಿ.ಡಿ.ಬಿ. ಮೆಂಬರ್, ರಾಮನಹಳ್ಳಿ, ಇಟ್ಟಮಾಡು ಅಂಚೆ, ಬಿಡದಿ ಹೋಬಳಿ, ರಾಮನಗರಂ ತಾಲ್ಲೂಕು
೨	ಬೆಳಗಾಂ ಜಿಲ್ಲೆ	ಗೋಕಾಕ್	೧	ಶ್ರೀ ಮಹದೇವ್ ಬಸಪ್ಪ ಪೂಜಾರ್ ಪೋಸ್ಟ್ ಬೆಟಗೇರಿ
			೨.	ಚಂದ್ರಪ್ಪ ಭೀಮಪ್ಪ ಬಣಕಾರಿ (ಎಸ್ಸಿ) ಅಂಚೆ ಶಿವಾಪುರ್, (ಕೊಣ್ಣೂರು)
		ವಿಜ್ಞಾಣಿ	೧.	ಪಂಡಿತ್ ಎಸ್. ಕಿಲ್ಲೇದಾರ್
			೨.	ಮೈತ್ರಿ ಲಗಮ್ಮ ದತ್ತ, ಅಂಚೆ ಜತ್ರಾರ
		ಸೌದತ್ತಿ	೧.	ಕಲ್ಲಪ್ಪ ಮಲ್ಲೇಶಪ್ಪ ಶಿರಕೊಳ್ ಅಂಚೆ ಬೆಟ್ಟಸೂರ್
			೨.	ಕಲ್ಲಪ್ಪ ಹೇಮಪ್ಪ ಲಮಾಣಿ (ಎಸ್ಸಿ) ಅಂಚೆ ಎಲ್ಲಮ್ಮ ತಾಂಡೆ ಉಗರಗೋಳ್
		ಸಂಕೇಶ್ವರ	೧.	ಬಸನಾಯಂಕ್ ಮಲ್ಲಪ್ಪ ಕುಂದರಗಿ (ಎಸ್ಟಿ) ಅಂಚೆ ಹಗೆದಾಳ್
			೨.	ಬಸವಣ್ಣೆಪ್ಪ ಶಿವಪ್ಪ ನೆಸರಿ, ಅಂಚೆ ಸಂಕೇಶ್ವರ
		ಅಥಣಿ	೧.	ಡಾ॥ (ಶ್ರೀಮತಿ) ಕುಂದಾ ಪಿ. ಕುಲಕರ್ಣಿ ಲಕ್ಷ್ಮೀನಿವಾಸ್ ಎಕ್ಸ್‌ಟೆನ್‌ಶನ್, ಅಥಣಿ

೧	೨	೩		೪
			೨.	ಮಹದೇವ್ ಕಾಂಬಳೆ (ಎಸ್ಸಿ) ಅಂಚೆ ತಿರಗುಪ್ಪ
		ರಾಮದುರ್ಗ	೧.	ಲಕ್ಷ್ಮಣ ವೆಂಕಟಪ್ಪ ಬಡಕಿ. ಅಂಚೆ ನಂದಿಹಾಳ
			೨.	ರಾಮಪ್ಪ ಭೀಮಪ್ಪ ಪೂಜಾರ್ (ಎಸ್ಸಿ) ಅವರಾದಿ
		ಬೈಲಹೊಂಗಲ	೧.	ಮಲ್ಲಪ್ಪ ರುದ್ರಪ್ಪ ಹಿತ್ತಲಮನಿ ಅಂಚೆ ಅಮ್ಮವಾಡಗಟ್ಟಿ
			೨.	ಬಸಪ್ಪ ತಳವಾರ್ (ಎಸ್ಸಿ) ಮುಂಕ್ಯಾಂ ಅಂಚೆ ಕೆರಕೊಪ್ಪ
	ಬೆಳಗಾಂ ಜಿಲ್ಲೆ	ನಂದಗಡ್	೧.	ಅರ್ಜುನ ದತ್ತಾತ್ರೇಯ ಭುರಸೆ ಅಂಚೆ ನಂದಗಡ್
			೨.	ಮಾಣಿಕರ್‌ವ್ ರಾಮಪ್ಪ ಸತ್ಕಣ್ಣವರ್ (ಎಸ್ಸಿ) ಅಂಚೆ ಹಿರೆ ವೊನವಳ್ಳಿ
		ಕಂಡಚಿ	೧.	ಕೃಷ್ಣಾ ಮಾಂಗ್ (ಎಸ್ಸಿ) ಮುಂಕ್ಯಾಂ ಪೋಸ್ಟ್ ಚಿಂಚೋಳಿ
			೨.	ಇಮಾನೊದ್ದಿನ್. ಎಸ್. ಚಮನ್‌ಶೇಖ್ ಮುಂಕ್ಯಾಂ ಅಂಚೆ ಕುಡಚಿ
		ಬೆಳಗಾಂ	೧.	ಶ್ರೀಮತಿ ಶಕುಂತಲಾ ಧರೇಂದ್ರ ಹಲಗಿ (ಎಸ್ಸಿ) ೩೬೬೩ ದೇಶಪಾಂಡೆ ಚಾಳ ಗೊಂದಳಿ ಗಲ್ಲಿ, ಬೆಳಗಾಂ
			೨.	ಗಂಗಾಧರ ವಿರುಪಾಕ್ಷಪ್ಪ ದುಮನಿ ೪೨೮/ಬಿ, ಕಾಂಗ್ರೆಸ್ ರೋಡ್, ಟಿಳಕವಾಡಿ, ಬೆಳಗಾಂ
	ಬಿಜಾಪುರ ಜಿಲ್ಲೆ	ಬದಾಮಿ	೧.	ಮಾಗುಂಡಪ್ಪ ವೀರಪ್ಪ ಕೌಲೂರು (ಎಸ್ಸಿ) ಬೇಲೂರು ಬದಾಮಿ ತಾಲ್ಲೂಕು ಬಿಜಾಪುರ ಜಿಲ್ಲೆ
			೨.	ಶ್ರೀ ಮಾರುತಿ ರಂಗಪ್ಪ, ನಾಯಕರ್ ಸುಳಿಗೆರೆ ಬಾದಾಮಿ ತಾಲ್ಲೂಕು, ಬಿಜಾಪುರ ಜಿಲ್ಲೆ
		ಬಾಗಲಕೋಟೆ	೧.	ಸ್ವರೆಪ್ಪ ಕೆ. (ಎಸ್ಸಿ) ಯಡಹಳ್ಳಿ, ಬಾಗಲಕೋಟ್ ತಾಲ್ಲೂಕು
			೨.	ಗೌಸ್ ಮೊಹದ್ದೀನ್ ಬಾಳಿಕಾಯಿ, ಬಾಗಲಕೋಟ್ ಅಂಚೆ, ಬಾಗಲಕೋಟ್
		ತಾಳಿಕೋಟೆ	೧.	ಭೀಮಪ್ಪ (ಎಸ್ಸಿ) ತೊಂಡೆಪ್ಪ ಹೊಲೇರ್ ತಮದೊಡ್ಡಿ, ಮುದ್ದೇಬಿಹಾಳ್ ತಾಲ್ಲೂಕು
			೨.	ಚನ್ನಬಸಪ್ಪ ಗೌಡ ದಂಡಪ್ಪ ಗೌಡ ಪಾಟೀಲ್ ಕಂಚ್ಚಬಾಳ ಹಳ್ಳಿ ಮುದ್ದೇಬಿಹಾಳ್ ತಾ.
		ಜಮಖಿಂಡಿ	೧.	ದುರ್ಗಪ್ಪ ಸತ್ಯಪ್ಪ ಹರಿಜನ ಮುಂಕ್ಯಾಂ ಬಿದರಿ, ಜಮಖಿಂಡಿ ತಾಲ್ಲೂಕು

೧	೨	೩	೪
			೨. ಕಲ್ಲಪ್ಪ ಸತ್ಯಪ್ಪ ಉಗಾರ್ ಮುಕ್ಕಾಂ ಹೊನ್ನೂರ್, ಜಮಖಂಡಿ ತಾಲ್ಲೂಕು
		ಬಿಜಾಪುರ	೧. ದೇವೇಂದ್ರಪ್ಪ ವೈ. ಮಾಯಾವಂಶಿ (ಎಸ್ಸಿ) ಅತರಗಾ, ಬಿಜಾಪುರ ಜಿಲ್ಲೆ
			೨. ಶರಣಪ್ಪ ಮಲ್ಲಪ್ಪ ಬಿರಾದರ್ ಮಠಪತಿಗಳ್ಳಿ. ಬಿಜಾಪುರ
	ಬಿದರ್ ಜಿಲ್ಲೆ	ಬಸವಕಲ್ಯಾಣ	೧. ನಾಗರೆಡ್ಡಿ ಯಾಚೆ ರಾಜೋಲ, ಬಸವಕಲ್ಯಾಣ
			೨. ಖೂಬ್ ಸಿಂಗ್ ಎನ್. ರಾಠೋಡ್ (ಎಸ್ಸಿ) ಯಕಲೂರ, ಬಸವ ಕಲ್ಯಾಣ
	ಜೀದರ್ ಜಿಲ್ಲೆ	ಔರಾದ್	೧) ವಾಹಬ್ ಮಿಯಾ ದಲಾಲ್ ಮೊಹಮ್ಮದ್ ಔರಾದ್, ಬಿದರ್ ಜಿಲ್ಲೆ.
			೨) ಮರುತ (ಎಸ್ಸಿ) ತಂದೆ ರೂಪಚಂದ್ ಚವಾಣ ಅಂಚೆ ಮೆಗವಾ, ಔರಾದ್ ತಾಲ್ಲೂಕು.
		ಬಿದರ್	೧) ಶಾಮರಾವ್ (ಎಸ್ಸಿ) ತಂದೆ ಸಿದ್ಧರಾಮಪ್ಪ ಮಾಲುಕುರೆ, ಆಲಿಯಂಬರ್ ಅಂಚೆ, ಬಿದರ್ ತಾಲ್ಲೂಕು.
			೨) ಅಮೃತರಾವ್ ಈರಪ್ಪ ಚಮುಕೋದ, ಔರಾದ್ ತಾಲ್ಲೂಕು, ಬಿದರ್ ಜಿಲ್ಲೆ.
		ಭಾಲ್ಕಿ	೧) ನ್ಯಾಮದೇವ್ ಮಾಜಿ ಪಂಚಾಯತ್ ಸದಸ್ಯ ಭಾಟಂಬಾರ್ಗ, ಭಾಲ್ಕಿ ತಾಲ್ಲೂಕು, ಬಿದರ್ ಜಿಲ್ಲೆ.
			೨) ಶ್ರವಣ ಗಾಯಕವಾಡ (ಎಸ್ಸಿ) ಬೀಮನಗರ ಗಂಜ ಭಾಲ್ಕಿ; ಭಾಲ್ಕಿ ತಾಲ್ಲೂಕು, ಬಿದರ್ ಜಿಲ್ಲೆ.
		ಹುಮ್ನಾ-ಬಾದ್	೧) ಹನುಮಂತಪ್ಪ ಭೀಮರಾವ್ (ಎಸ್ಸಿ) ಕಂಬಾರ್. ಹುಮ್ನಾಬಾದ್ ತಾಲ್ಲೂಕು ಬಿದರ್ ಜಿಲ್ಲೆ.
			೨) ಮಾಣಿಕಪ್ಪ, ತಂದೆ ಗಿರೆಪ್ಪ, ಹಳ್ಳಿಖೇಡ್, ಹುಮ್ನಾಬದ್ ತಾಲ್ಲೂಕು, ಬಿದರ್ ಜಿಲ್ಲೆ.
	ಬಳ್ಳಾರಿ ಜಿಲ್ಲೆ	ಬಳ್ಳಾರಿ	೧) ಡಿ. ಸಿ. ರುದ್ರಪ್ಪ, ತಂದೆ ತಿಪ್ಪಯ್ಯ, ಸತ್ಯನಾರಾಯಣ ಪೇಟೆ, ಬಳ್ಳಾರಿ.
			೨) ದಾಸರಿ ಸಣ್ಣ ತಿಪ್ಪಯ್ಯ (ಎಸ್ಸಿ) ತಂದೆ ಗೋವಿಂದಪ್ಪ, ಸಿದ್ದಗಿನಮೊಲೆ, ಬಳ್ಳಾರಿ ತಾಲ್ಲೂಕು.

೧	೨	೩		೪
		ಸಿರಗುಪ್ಪ	೧)	ಅಮೃತಪುರದ ಲಿಂಗಣ್ಣ, ತಂದೆ ಪುಟ್ಟಪ್ಪ, ಉಳೂರ್‌ಹಳ್ಳಿ, ಸಿರಗುಪ್ಪ ತಾಲ್ಲೂಕು.
			೨)	ಹರಿಜನ ಹುಸೇನಪ್ಪ, (ಎಸ್ಸಿ) ೭ನೇ ವಾರ್ಡ್, ಸಿರಗುಪ್ಪ.
		ಹೊಸಪೇಟೆ	೧)	ಟಿ. ಅಹಮದ್ ಸಾಬ್, ತಂದೆ ರಾಜಾಸಾಬ್, ಮಾಜಿ ಕೌನ್ಸಿಲರ್, ಕಂಪ್ಲಿ, ಹೊಸಪೇಟೆ ತಾಲ್ಲೂಕು.
			೨)	ಯಮುನಾ ನಾಯಕ್, (ಎಸ್ಸಿ) ತಂದೆ ಲೋಕನಾಯಕ್, ವಂಡಿಯಮ್ಮನಹಳ್ಳಿ, ತಾಂಡೆ, ಹೊಸಪೇಟೆ ತಾಲ್ಲೂಕು.
		ಹಗರಿ- ಬೊಮ್ಮನಹಳ್ಳಿ	೧)	ಅರಣಿ ವೀರಣ್ಣ, ಒಕ್ಕಲಿಗ, ನಂದಿಹಳ್ಳಿ, ಹಡಗಲಿ ತಾಲ್ಲೂಕು.
			೨)	ಹರಿಜನ ಮಾಯಪ್ಪ (ಎಸ್ಸಿ) ಬಾಚಿಗೊಂಡನಹಳ್ಳಿ, ಹಗರಿ ಬೊಮ್ಮನಹಳ್ಳಿ.
		ಕೊಟ್ಟೂರು	೧)	ಚಪ್ಪರದ ಹಳ್ಳಿ, ಬಸಣ್ಣ, ಮಾಜಿ ವೈಸ್ ಚೇರಮನ್, ಬೆಣ್ಣಿಹಳ್ಳಿ, ಹರಪನಹಳ್ಳಿ ತಾಲ್ಲೂಕು.
			೨)	ಲಂಬಾಣಿ ಮುನಿಯಾ ನಾಯಕ್ (ಎಸ್ಸಿ) ಚಿಕ್ಕಜೋಗಿಹಳ್ಳಿ, ಕೂಡಲಗಿ ತಾಲ್ಲೂಕು.
ಚಿತ್ರದುರ್ಗ		ಚಳ್ಳಕೆರೆ	೧)	ಜಿ. ಪಿ. ಹಿಮ್ಮಾಂತರೆಡ್ಡಿ, ಕುರಡಿಹಳ್ಳಿ, ಚಳ್ಳಕೆರೆ ತಾಲ್ಲೂಕು.
			೨)	ಎನ್. ಬಿ. ಬೋರಯ್ಯ (ಎಸ್ಸಿ) ನಾಯಕ ನನ್ನಿವಾಲ, ಚಳ್ಳಕೆರೆ ತಾಲ್ಲೂಕು.
ಕೂರ್ಗ್ ಜಿಲ್ಲೆ		ಮಡಿಕೇರಿ	೧)	ಹರಿಜನ ಸಂಬ್ಬಯ, ತಂದೆ ಅಣ್ಣ, ಡೈರೆಕ್ಟರ್, ಬೆಟ್ಟಗೇರಿ ವಿಎಸ್‌ಎಸ್‌ಎನ್, ಬೆಟ್ಟಗೇರಿ ಅಂಚೆ, ಮಡಿಕೇರಿ ಜಿಲ್ಲೆ.
			೨)	ಬಿ. ಎ. ಗಣಪತಿ, ಕೊಯನಾಳು ಹಳ್ಳಿ, ಸಂಪಾಜೆ ಅಂಚೆ, ಮಡಿಕೇರಿ, ಕೊಡಗು ಜಿಲ್ಲೆ.
		ಕುಶಾಲನಗರ	೧)	ಸಿ. ಕೆ. ಪುಟ್ಟಯ್ಯ (ಎಸ್ಸಿ) ಚಿಕ್ಕಬಾಂದಾರಾ, ಕೊಡ್ಲಿ ಪೇಟ್, ಉತ್ತರ ಕೊಡಗು.

೧	೨	೩	೪
			೨) ಕೆ. ಎನ್. ಮಂರಳೀದರ್, ಓನೇ, ಹೊಸಕೋಟೆ, ಸುಂಟಿಕೊಪ್ಪ, ಉತ್ತರ ಕೊಡಗು.
		ಗೋಣಿ– ಕೊಪ್ಪಲ್	೧) ಕೆ. ಎಂ. ಕುಟ್ಟಪ್ಪ, ಮೂಯಮವಡ್ಡಿ ಹಳ್ಳಿ, ಮೂಯಮವಡ್ಡಿ ಅಂಚೆ, ವಯಾ ಗೋಣಿಕೊಪ್ಪಲ ತಾಲ್ಲೂಕು
	ಚಿಕ್ಕಮಗಳೂರು ಜಿಲ್ಲೆ	ಕಡೂರು	೧) ಡಿ. ವೀರಯ್ಯ, ಶಂಕರಪುರ, ಚಿಕ್ಕಮಂಗಳೂರು.
			೨) ಎಸ್. ಬಿ. ಗೋವಿಂದಸ್ವಾಮಿ, ಸಕ್ಕರೆಪಟ್ಟಣ, ಕಡೂರು ತಾಲ್ಲೂಕು.
		ತರೀಕೆರೆ	೧) ಎಲ್. ಎಚ್. ಶ್ರೀನಿವಾಸ (ಎಸ್ಸಿ) ತಂದೆ ದಿ॥ ಎಲ್. ಎಚ್. ತಿಮ್ಮಾಬೋವಿ ಲಕ್ಕವಳ್ಳಿ, ತರಿಕೆರೆ ತಾಲ್ಲೂಕು.
			೨) ಭಾವಿ ಮನೆ ವೀರಣ್ಣ, ಲಿಂಗದಹಳ್ಳಿ, ತರಿಕೆರೆ ತಾಲ್ಲೂಕು,
	ಧಾರವಾಡ ಜಿಲ್ಲೆ	ಧಾರವಾಡ	೧) ಮಾರುತಿ ಎಲ್ಲಪ್ಪ ಮಾದರ್, (ಎಸ್ಸಿ) ಮಂಗಳಗಟ್ಟಿ, ಧಾರವಾಡ ತಾಲ್ಲೂಕು.
			೨) ಕಲ್ಲಪ್ಪ ಭೂತಪ್ಪ ಮಡ್ಡಿ, ಶಿವಳ್ಳಿ, ಧಾರವಾಡ ತಾಲ್ಲೂಕು.
	ಧಾರವಾಡ ಜಿಲ್ಲೆ	ಬ್ಯಾಡಗಿ	೧) ಬಸವಲಿಂಗಪ್ಪ ನಾಗಪ್ಪ ಮುತ್ತಣ್ಣವರೆ, ಕುರದ ಕೋಡಿಹಳ್ಳಿ, ಬ್ಯಾಡಗಿ ತಾಲ್ಲೂಕು.
			೨) ಸುಬ್ಬಣ್ಣ ದಾಸಪ್ಪ ಶಿಲ್ಪಿ, (ಭೋವಿ) ಬ್ಯಾಡಗಿ ತಾಲ್ಲೂಕು.
		ಹಿರೆಕೆರೂರ್	೧) ಜಿ.ಬಿ. ನಾಡಗೇರ್, ಹಿರೆಕೆರೂರು.
			೨) ಆರ್.ಕೆ, ಬಡಗೇರ್ (ಎಸ್ಸಿ) ಹಂಸಭಾವಿ, ಹಿರೆಕೆರೂರು ತಾಲ್ಲೂಕು.
		ಹಾನಗಲ್	೧) ಮಂಜುನಾಥ ಫಕೀರಪ್ಪ ಯಲ್ಲೂರ ಅಕ್ಕಿವಳ್ಳಿ,
			೨) ಗುಡ್ಡಪ್ಪ ಸಿದ್ದಪ್ಪ. ಹೊಸಮನಿ (ಎಸ್ಸಿ) ಹಿರೆ ಬಾಸೂರು.
		ನರಗುಂದ	೧) ಸಿದ್ದಪ್ಪ ತಿರುಕಪ್ಪ ಬೂದಿಹಾಳ, ಕುರಲಗೇರಿ, ನರಗುಂದ ತಾ. ಧಾರವಾಡ ಜಿ.
			೨) ಪರುಶರಾಂ ದುರ್ಗಪ್ಪ ಹೊನಕೇರಿ (ಎಸ್ಸಿ) ನರಗುಂಧ, ಧಾರವಾಡ ಜಿಲ್ಲೆ,
		ಅಣ್ಣಿಗೇರಿ	೧) ಗಿರಿಯಪ್ಪ ಗಿರಿಯಪ್ಪ ವೈದ್ಯ, (ಎಸ್ಸಿ) ನವಲಗುಂದ.

1	2	3		4
			೨)	ಮಲ್ಲಪ್ಪ ಬಸಪ್ಪ ಹಳ್ಳದ ಶಾನವಾಡ. ನವಲಗುಂದ ತಾಲ್ಲೂಕು.
		ಹಾವೇರಿ	೧)	ಮೋಹನ್ ನಿಂಗಪ್ಪ ಮೂದಿಗರೆಡ್ಡಿ (ಎಸ್ಸಿ) ಹಾವನೂರು, ಹಾವೇರಿ ತಾಲ್ಲೂಕು.
			೨)	ಸಿದ ಲಿಂಗಪ್ಪ ಚನ್ನಬಸಪ್ಪ ಮಂಡಕ್ಕಿ, ಹಾವೇರಿ ತಾಲ್ಲೂಕು
		ಹಂಬ್ನಳ್ಳಿ	೧)	ಹನುಮಂತಪ್ಪ (ಎಸ್ಟಿ) ಅಪ್ಪಣ್ಣ ಮಾದರ್, ಬ್ಯಾಹಟ್ಟಿ.
			೨)	ಚಂದ್ರಶೇಖರಪ್ಪ ಹಳ್ಳಪ್ಪ. ಇಂಗಲಹಳ್ಳಿ
		ಕುಂದಗೋಳ	೧)	ಅಣ್ಣಿಗೇರಿ. ಎಲ್ಲಪ್ಪ ಚನ್ನಬಸಪ್ಪ ಕಾಗಿ (ಎಸ್ಸಿ) ಅಂಬೇಡಕರ್ ನಗರ, ಕುಂದಗೋಳ.
			೨)	ಶ್ರೀ ವೆಂಕನಗೌಡ ನಿಂಗನಗೌಡ ಪಾಟೀಲ್, ಕಮದಳ್ಳಿ, ಕುಂದಗೋಳ ತಾಲ್ಲೂಕು.
		ಸವಣೂರು	೧)	ಕೇಶವರಾವ್ ಗಣಪತ್ ರಾವ್ ಕುಲಕರ್ಣಿ, ಹುರಳಿ ಕೊಪ್ಪಿ, ಸವಣೂರು ತಾ.
			೨)	ನಾನ್ಯಪ್ಪ. ಅಚವಂಪ್ಪ, ಲಮಾಣಿ (ಎಸ್ಸಿ) ಕೃಷ್ಣಾಪುರ, ಸವಣೂರು ತಾ.
		ಮುಂಡರಗಿ	೧)	ಮೋದಿನ್‌ಸಾಬ್ ರಸಾಲ್ ಸಾಬ್, ಕಂಕನವಾಡಿ ಮುಂಡರಗಿ.
			೨)	ರುದ್ರಪ್ಪ ಕನಕೊಪ್ಪ ಗುಡಿ (ಎಸ್ಸಿ) ಮುಂಡರಗಿ ತಾಲ್ಲೂಕು.
		ಗದಗ	೧)	ಎಸ್.ಕೆ, ಮೇಟಿ, ಬಿ.ಕಾಂ. ಎಲ್‌ಎಲ್‌ಬಿ. ವಕೀಲರು ಹಾಗೂ ವಕ್ಕಲಿಗರು, ಗದಗ
			೨)	ಹನುಮಂಪ್ಪ (ಎಸ್ಸಿ) ತಂದೆ ದಾಸರ್. ಬಂಕದ ಕಟ್ಟಿ, ಗದಗ ತಾಲ್ಲೂಕು.
	ಧಾರವಾಡ ಜಿಲ್ಲೆ	ಲಕ್ಷ್ಮೇಶ್ವರ	೧)	ರಂಗಪ್ಪ ತಿಮ್ಮಪ್ಪ ಆಳವಂಡಿ, ಸಾಕಿನ್, ಬೆಳ್ಳಟ್ಟಿ. ಶಿರಹಟ್ಟಿ ತಾ.
			೨)	ಬಸವಣ್ಯಪ್ಪ ನಾಗಪ್ಪ ಹರಿಜನ (ಎಸ್ಸಿ) ಲಕ್ಷ್ಮೇಶ್ವರ. ಶಿರಹಟ್ಟಿ ತಾ.
	ಗುಲ್ಬರ್ಗ ಜಿಲ್ಲೆ	ಸೈದಾಪುರ	೧)	ಶಿವರಾಜ್, ತಂದೆ ನಾಗರೆಡ್ಡಿಪ್ಪ ಪಾಟೀಲ್ ಮುಕ್ಕಾಂ ಪೋಸ್ಟ್‌ಸೆಟ್ಟಿಹಳ್ಳಿ ತಾ. ಯಾದಗಿರಿ ಜಿ. ಗುಲ್ಬರ್ಗ.
			೨)	ಸಂಗ್ಯಾನ, ಬೆಳಗುಂದ (ಎಸ್ಸಿ) ಬೆಳಗುಂದ ಅಂಚೆ ಮಯಾ ಸೈದಾಪುರ, ತಾ. ಯಾದಗಿರಿ, ಗುಲ್ಬರ್ಗ ಜಿಲ್ಲೆ.
		ಯಾದಗಿರಿ	೧)	ನಾಗಪ್ಪ ಭೀಮಪ್ಪ ಬೆನಕಲ್ (ಎಸ್ಸಿ) ಕೋಳಿವಾಡ, ಯಾದಗಿರಿ ಅಂಚೆ, ಯಾದಗಿರಿ ತಾ. ಗುಲ್ಬರ್ಗ ಜಿಲ್ಲೆ.
			೨)	ಶಿವಶರಣ್ಪ ಗುಂಡಪ್ಪ ಕಲ್ಬುರ್ಗಿ ಗೌರಿಶಂಕರ ಫೈನಾನ್ಸ್, ಯಾದಗಿರಿ. ಗುಲ್ಬರ್ಗ ಜಿಲ್ಲೆ.

೧	೨	೩	೪
	ಚಿತ್ತಾಪುರ	೧)	ಶಿವರಾಯ (ಎಸ್ಸಿ) ತಂದೆ ಕಾಳಪ್ಪ, ಹೆಬ್ಬಾಳ ಅಂಚೆ, ಚಿತ್ತಾಪುರ ತಾ.
		೨)	ಶಂಕರರಾವ್ ಬೆಟಗೇರಿ, ತೆನಸಹಳ್ಳಿ, ವಯಾ ವಂಚಬೇಡ, ಚಿತ್ತಾಪುರ ತಾ.
	ಶೋರಾಪುರ	೧)	ಶಂಕರ್ ಜಿ, ವಾಣಿಕಲ್, ಎಂ.ಎ. ಎಲ್.ಎಲ್‌ಬಿ ನಾಗನೂರು ಹಳ್ಳಿ, ಶೋರಾಪುರ ತಾ.
		೨)	ಶಿವಯೋಗಪ್ಪ ಬಿ.ಎ. (ಎಸ್ಸಿ) ತಂದೆ ಬಸಪ್ಪ, ಚಿಂಚೋಳಿ ಹಳ್ಳಿ, ಶೋರಾಪುರ ತಾ.
	ಶಹಾಪುರ	೧)	ಸೋಮರೆಡ್ಡಿ ಗುಲ್‌ಸಾರಂ ಹಳ್ಳಿ, ಶಹಾಪುರ ತಾ
		೨)	ಶಿವರಾಂ (ಎಸ್ಸಿ) ತಂದೆ ಬಡ್ಡನಸಿಂಗ್, ಮುಕ್ಕಾಂ ಹಾರನಗೆರೆ, ಶಹಾಪುರ ತಾ,
	ಶಹಾಬಾದ್	೧)	ಭೀಮಶಾ ಚಂದ್ರಮ್ (ಎಸ್ಸಿ) ಹಳೆ ಸಹಾಬಾದ್ ಶಹಾಬಾದ್ ಅಂಚೆ, ಗುಲ್ಬರ್ಗ ಜಿಲ್ಲೆ.
		೨)	ಹಾಜಿ ರಾಜ ಅಹಮದ್ ಇಂಗಲಿ, ವೈಸ್ ಪ್ರೆಸಿಡೆಂಟ್, ಜಿಲ್ಲಾ ಜನತಾ ಪಾರ್ಟಿ, ಶಹಾಬಾದ್.
	ಸೇಡಂ	೧)	ತಿಪ್ಪಣ್ಣ ಹರಿಜನ (ಎಸ್ಸಿ) ಜನತಾ ಪಾರ್ಟಿ ಕೆಲಸಗಾರ, ಚಿಂಚೋಳಿ ಅಂಚೆ, ಚಿಂಚೋಳಿ ತಾ
		೨)	ಅವ್ಯಿತರಾವ್ ಈರಪ್ಪ ಪಾಟೀಲ್ ಯರಹಳ್ಳಿ, ಸೇಡಂ ತಾಲ್ಲೂಕು.
ಗುಲ್ಬರ್ಗ ಜಿಲ್ಲೆ	ನಾಲವಾರ್	೧)	ಮೋತಿ ನಾಯಕ್ (ಎಸ್ಸಿ) ತಂದೆ ಶ್ರೀ ಕೇಶವ ನಾಯಕ್, ಭೋಜು ನಾಯಕ ತಾಂಡ; ನಾಲವಾರ್, ಚಿತಾಪುರ ತಾ॥
		೨)	ಶಂಕರಪ್ಪ, ತಂದೆ ಶಿವಲಿಂಗಪ್ಪ, ಮುಕಲ್ ನಾಲವಾರ, ಚಿತ್ತಾಪುರ ತಾ॥
	ಗುಲ್ಬರ್ಗ	೧)	ಆತನ್‌ಸಿಂಗ್ (ಎಸ್ಸಿ), ತಂದೆ ಸಕ್ರು ರಾಠೋಡ್, ಜೇವರ್ಗಿ ತಾ.
		೨)	ಸಿದ್ದಕಾಂತ ತಡಕಲ್, ಮಹಗಾಂ ಅಂಚೆ.
ಕೋಲಾರ ಜಿಲ್ಲೆ	ಕೋಲಾರ	೧)	ಪಿ.ಎಲ್. ವೆಂಕಟಾಚಲಪತಿ, ವೈಸ್ ಪ್ರೆಸಿಡೆಂಟ, ಲಯನ್ಸ್ ಕ್ಲಬ್, ಕೋಲಾರ ಜಿ.ಟಿ. ಸ್ಟ್ರೀಟ್, ಕೋಲಾರ.
		೨)	ಮುನಿಕದಿರಪ್ಪ (ಎಸ್ಸಿ) ಹರಿಜನ (ಸಂಗಟೂರು, ಕೋಲಾರ ತಾ.
	ಗೌರಿಬಿದನೂರು	೧)	ಕೆ. ರಾಮಚಂದ್ರರಾವ್, ತಂದೆ ಕೊಮಾರಪ್ಪ, ಹೊಸೂರು, ಗೌರಿಬಿದನೂರು ತಾ.
		೨)	ವೆಂಕಟಸ್ವಾಮಿ (ಎಸ್ಸಿ) ಕಂಟ್ರಾಕ್ಟರ್ (ಪಿಡ್ಲ್ಯೂಡಿ) ಕೇರಾಫ್ ಪಿ.ಎನ್. ಬಾಬಣ್ಣ, ಬಿ.ಎಚ್. ರೋಡ್, ಗೌರಿಬಿದನೂರು ತಾ.

೧	೨	೩	೪
ಮೈಸೂರು ಜಿಲ್ಲೆ	ಮೈಸೂರು	೧)	ಕೆ. ಕೆಂಚಪ್ಪ (ಎಸ್ಸಿ) ತಂದೆ ದೇವಣ್ಣ, ಹಾರೋಹಳ್ಳಿ, ಜಯಪುರ ಹೋಬಳಿ, ಮೈಸೂರು ತಾ.
		೨.	ವಿ. ಚಿನ್ನಸ್ವಾಮಿ, ತಂದೆ ವೆಂಕಟಾಚಲಯ್ಯ, ಕುಪ್ಪೆಗಾಲ, ವರುಣಾ ಹೋಬಳಿ, ಮೈಸೂರು ತಾಲ್ಲೂಕು.
ಮಂಗಳೂರು ಜಿಲ್ಲೆ	ಮಂಗಳೂರು	೧)	ಎಂ. ಕೆ. ಸುಧಾಕರ (ಬಿಲ್ಲವಾ) ತಂದೆ ಎಂ.ಕೆ ಮಂಜಪ್ಪ, ಮಲ್ಪೆ. ಉಡುಪಿ ತಾ.
		೨)	ಮಹಾಲಿಂಗನಾಯಕ್, ತಂದೆ ಶ್ರೀ ಕೃಷ್ಣ ನಾಯಕ್, ಮಾಜಿ ಸದಸ್ಯ ಬ್ರಹ್ಮಾವರ ಟೌನ್ ಪಂಚಾಯಿತ್ ಬ್ರಹ್ಮಾವರ, ಉಡುಪಿ ತಾಲ್ಲೂಕು.
ಉತ್ತರ ಕನ್ನಡ ಜಿಲ್ಲೆ	ಎಲ್ಲಾಪುರ	೧)	ನಾರಾಯಣ ಕೇರಪ್ಪ ವಾಟನಕರ್ (ಎಸ್ಸಿ) ಒಕ್ಕಲಿಗ, ಎಲ್ಲಾಪುರ (ಉ.ಕ.)
		೨)	ಗೋಪಾಲ ಅಣ್ಣಪ್ಪ ಪಾಟೀಲ್, ಒಕ್ಕಲಿಗ, ಎಲ್ಲಾಪುರ (ಉ.ಕ.)
	ಹಳ್ಯಾಳ	೧)	ಫಕೀರಪ್ಪ ಸುಂಕಪ್ಪ ಕೊರವರ (ಎಸ್ಸಿ) ಒಕ್ಕಲಿಗ, ಹಳ್ಯಾಳ (ಉ.ಕ.)
		೨)	ಓಮಣ್ಣ, ಬಂದ್ದಪ್ಪ ಅಗರೊಳ್ಳಿ. ಒಕ್ಕಲಿಗ, ಹಳ್ಯಾಳ (ಉ.ಕ.)
ಉತ್ತರ ಕನ್ನಡ ಜಿಲ್ಲೆ	ಸಿದ್ದಾಪುರ	೧)	ನಾರಾಯಣ ತಿಪ್ಪ ಹರಿಜನ (ಎಸ್ಸಿ) ಒಕ್ಕಲಿಗ ಮುಕ್ಕಾಂ ಹಾಗೂ ಆಂಚೆ ಜಜ್ಜೂರು, ಸಿದ್ದಾಪುರ ತಾ.
		೨)	ನಾರಾಯಣ ಲಖಿಮನಗೌಡ, ಒಕ್ಕಲಿಗ, ಕಿಲವಳ್ಳಿ, ಸಿದಾಪುರ ತಾ.
	ಸಿರ್ಸಿ	೧)	ವಾಸುದೇವ, ಹೆಚ್. ದೇಶಭಾಗ (ಎಸ್ಸಿ) ಶ್ರದ್ಧಾನಂದ ಗಲ್ಲಿ, ಸಿರ್ಸಿ (ಉ.ಕ.)
		೨)	ಬಿ.ಎಂ. ಹೆಗ್ಗಡೆ. ಹೊನ್ನೆಕಟ್ಟೆ, ಒಕ್ಕಲಿಗ, ಅಂಚೆ ಹೆಗಡೆ ಕಟ್ಟೆ, ಸಿರ್ಸಿ ತಾ. (ಉ.ಕ.)
	ಹೊನ್ನಾವರ	೧)	ದುಗ್ಗಪ್ಪ ಇ. ಹೆಬ್ಬಳೆ(ಎಸ್ಸಿ) ಒಕ್ಕಲಿಗ, ಭಟ್ಕಲ್ (ಉ. ಕ.)
		೨)	ಇಬ್ರಾಹಿಂ ಕಾಸಿಂ ಸಾಬ್, ಹೊನ್ನಾವರ.
	ಕುಮಟಾ	೧)	ಶಿವುಬೊಮ್ಮನಗೌಡ, ದುಂಡಕುಲಿ ಅಂಚೆ, ಡಿವಿಗಿ, ಕುಮಟಾ ತಾಲ್ಲೂಕು,
		೨)	ನಾಗಪ್ಪ ಮಂಕ್ರಿ (ಎಸ್ಸಿ) ಅಂಚೆ ಬಾಗೊನ್ನ, ಕುಮಟಾ ತಾ.
ರಾಯಚೂರು ಜಿಲ್ಲೆ	ಸಿಂಧನೂರು	೧)	ನರೇಂದ್ರನಾಥ್, ತಂದೆ ಎಂ. ಸೂರ್ಯರಾವ್, ಒಕ್ಕಲಿಗ, ಸಿಂಧನೂರು, ರಾಯಚೂರು ಜಿಲ್ಲೆ.

೧	೨	೩		೪
			೨)	ರಾಮಣ್ಣ ಹರಿಜನ (ಎಸ್ಸಿ) ಮುಕ್ಕಾಂ ಹೊರೆತ ನೂರು, ಬದರಲಿ ಅಂಚೆ, ಸಿಂಧನೂರು ತಾ.
		ಕಂಪ್ಪಗಿ	೧)	ದುರ್ಗಪ್ಪ ಹನುಮಪ್ಪ (ಎಸ್ಸಿ) ನವಲಹಳ್ಳಿ ಅಂಚೆ, ಕುಷ್ಟಗಿ ತಾ,
			೨)	ಬಿ. ಸಿ, ಪೋಲೀಸ್ ಪಾಟೀಲ್, ಕೊರದಕೆರೆ ಅಂಚೆ, ಕಂಪ್ಪಗಿ ತಾ.
		ರಾಯಚೂರು	೧)	ಎಂ. ನರಸಪ್ಪ, ವಕೀಲರು, ರಾಯಚೂರು.
			೨)	ಕೆ. ಕೃಷ್ಣಮೂರ್ತಿ, ವಕೀಲರು, ತಿಮ್ಮಾಪುರ ಪೇಟೆ, ರಾಯಚೂರು ಜಿಲ್ಲೆ.
		ಗಂಗಾವತಿ	೧)	ಜಿ. ರುದ್ರಪ್ಪ, ಎಂ.ಓ, ಮಾಲಪ್ಪ, ಚಿಕ್ಕಜಂತ ಕಲ್ ಅಂಚೆ. ಗಂಗಾವತಿ ತಾ. ರಾಯಚೂರು ಜಿಲ್ಲೆ.
			೨)	ಮಹಾಂತಪ್ಪ, ತಂದೆ ಕರಿ ಸಿದ್ದಪ್ಪ, ಗೋದಿ ನಾಳು, ಕನಕಗಿರಿ ಅಂಚೆ, ಗಂಗಾವತಿ ತಾ. ರಾಯಚೂರು ಜಿಲ್ಲೆ.
		ಯಲಬುರ್ಗ	೧)	ಸಿದ್ದನಗೌಡ ಹೊರಪೇಟೆ. ವಂಡಲಗಿರಿ ಅಂಚೆ. ಯಲಬುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.
			೨)	ರಾನದೆಪ್ಪ ಬನ್ನಿಕೊಪ್ಪ ಅಂಚೆ, ಯಲಬುರ್ಗಾ ತಾಲ್ಲೂಕು.
		ಕೊಪ್ಪಳ	೧)	ಎಸ್. ಎಂ. ಬಂಗಾರ ಸೆಟ್ಟರ್, ಸ್ವತಂತ್ರ ಹೋರಾಟಗಾರ, ಕೊಪ್ಪಳ, ರಾಯಚೂರು ಜಿಲ್ಲೆ.
			೨)	ಕೆಂಚಪ್ಪ ಅನಲಪ್ಪ ಕೊರಕಾಮಿ (ಎಸ್ಸಿ) ಕಾತರ್ಗಿ ಅಂಚೆ, ಕೊಪ್ಪ ತಾಲ್ಲೂಕು, ರಾಯಚೂರು ಜಿಲ್ಲೆ.
	ರಾಯಚೂರು ಜಿಲ್ಲೆ	ಮಾನವಿ	೧)	ಲಿಂಗಪ್ಪ (ಎಸ್ಸಿ) ತಂದೆ ಗ್ಯಾನಪ್ಪ ಹಾಲಪುರ ಮಾನವಿ ತಾಲ್ಲೂಕು, ಮಾಜಿ ತಾಲ್ಲೂಕು ಅ.ಮಂ. ಸದಸ್ಯ.
			೨)	ಶಿವರುದ್ರಗೌಡ. ತಂದೆ ಬಸಣ್ಣಗೌಡ, ಸಾಕಿನ್‌ಕಲಂಗಿರಿ, ರಾಯಚೂರು ಜಿಲ್ಲೆ.
	ಶಿವಮೊಗ್ಗ ಜಿಲ್ಲೆ	ಶಿವಮೊಗ್ಗ	೧)	ಎಂ. ಎಸ್. ಪುಟ್ಟಸ್ವಾಮಿ, ತಂದೆ ಶಿವಪ್ಪ ನಾಯಕ್, ಮಾನಸಿಬಯಲ್, ನೆಮ್ಮೂರ್ ಅಂಚೆ, ಶೃಂಗೇರಿ ತಾ.
			೨)	ಕೆಂಪ. ತಂದೆ ಬೇಲಯ್ಯ (ಎಸ್ಸಿ) ಕೋಟೆ, ಹೊಸಕೊಪ್ಪ ಅಂಚೆ. ಕೊಪ್ಪ ತಾ.

೧	೨	೩		೪
		ಚನ್ನಗಿರಿ	೧)	ಟಿ. ಹುನುಮಂತಪ್ಪ, (ಎಸ್ಸಿ) ಅಜ್ಜಹಳ್ಳಿ) ಚನ್ನಗಿರಿ ತಾ. ಶಿವಮೊಗ್ಗ ಜಿಲ್ಲೆ.
			೨)	ಡಿ. ಮಹರುದ್ರಪ್ಪ, ಚನ್ನಗಿರಿ, ಶಿವಮೊಗ್ಗ ಜಿಲ್ಲೆ.
		ಭದ್ರಾವತಿ	೧)	ಮೊಹಮ್ಮದ್ ಅಸಗರ್, ಬಿ.ಎಸ್ಸಿ., ಎಲ್‌ಎಲ್‌ಬಿ., ತಂದೆ ಮೊಹಮ್ಮದ್ ಖಿಲಂದರ್ ಸಾಬ್ ಧಡನಘಟ್ಟ, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ.
			೨)	ಜೆ. ಆನಂದಪ್ಪ (ಎಸ್ಸಿ) ತಂದೆ ಗಂರುವ ಭೋವಿ ಅಂತರಗಂಗೆ ಹಳ್ಳಿ, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ.
		ಸಾಗರ	೧)	ಮಂಜಪ್ಪ ಎಲ್ಲದಕೋನೆ (ಎಸ್ಸಿ) ಹುಮಚ, ಹೊಸನಗರ ತಾ. ಶಿವಮೊಗ್ಗ ಜಿಲ್ಲೆ.
			೨)	ಎಂ. ವಾಸಂದೇವಾಚಾರ್, ಹೊಸನಗರ, ಶಿವಮೊಗ್ಗ ಜಿಲ್ಲೆ.
		ಶಿಕಾರಿಪುರ	೧)	ಡಿ. ತಿಪ್ಪಣ್ಣ (ಎಸ್ಸಿ) ಚೇರ್‌ಮನ್ ವಿಲೇಜ್ ಪಂಚಾಯತ್ ಕೆಂಗೆಟ್ಟ, ಶಿಕಾರಿಪುರ ತಾಲ್ಲೂಕು
			೨)	ಡಿ. ಲೋಕೇಶಪ್ಪ, ತಾಲ್ಲೂಕು ಕಚೇರಿ ರಸ್ತೆ, ಶಿಕಾರಿಪುರ.
	ತುಮಕೂರು ಜಿಲ್ಲೆ	ಮಧುಗಿರಿ	೧)	ನರಸಿಂಹಯ್ಯ, (ಎಸ್ಸಿ) ಐ.ಡಿ. ಹಳ್ಳಿ, ಮಧುಗಿರಿ ತಾ.
			೨)	ಎಂ. ಡಿ. ನಾಗಪ್ಪ ಶೆಟ್ಟಿಹಳ್ಳಿ ಮಧುಗಿರಿ ತಾ.
		ತುಮಕೂರು	೧)	ಅಂಜನಪ್ಪ (ಎಸ್ಟಿ) ಒಕ್ಕಲಿಗ ಉರಕೆರೆ ಕಸಬಾ ಹೋಬಳಿ ತುಮಕೂರು ಜಿಲ್ಲೆ
			೨)	ಟಿ. ಆರ್. ರಾಮಲಿಂಗಯ್ಯ, ತಂದೆ ಟಿ. ರಾಮಯ್ಯ, ಒಕ್ಕಲಿಗ, ತೀತಾ, ಕೊರಟಗೆರೆ ತಾಲ್ಲೂಕು
	ತುಮಕೂರು ಜಿಲ್ಲೆ	ಗುಬ್ಬಿ	೧)	ದೊಡ್ಡಲಿಂಗಯ್ಯ, (ಎಸ್ಸಿ) ತಂದೆ ವೀರಯ್ಯ, ಕುಂದರನ ಹಳ್ಳಿ, ಆದಲಗೆರೆ ಅಂಚೆ, ಗುಬ್ಬಿ ತಾ.
			೨)	ಸೀತಾರಾಮರಾಜ್ ಅರಸ್, ಮಾಜಿ ವೈಸ್ ಪ್ರಸಿಡೆಂಟ್, ಪಂಚಾಯತ್, ಕಡಬ ಅಂಚೆ, ಗುಬ್ಬಿ ತಾಲ್ಲೂಕು.
		ತುರುವೇಕೆರೆ	೧)	ರಾಗಯ್ಯ (ಎಸ್ಟಿ) ತಂದೆ ಬ್ಯಾಟಿ ರಂಗಯ್ಯ, ಟಿ. ಹೊಸಹಳ್ಳಿ, ಗುಡ್ಡೇನಹಳ್ಳಿ ಅಂಚೆ, ತುರುವೇಕೆರೆ ತಾ.
			೨)	ಡಿ. ವಿ. ಲಕ್ಕಣ್ಣ, ತಂದೆ ವೀರಪ್ಪ, ದೊಡ್ಡ ಹಟ್ಟಿ, ಸಂಪಿಗೆ ಅಂಚೆ. ತುರುವೇಕೆರೆ ತಾ.
		ಚಿಕ್ಕನಾಯಕನ ಹಳ್ಳಿ.	೧)	ಎಸ್. ಮುರುಡಯ್ಯ, ತಂದೆ ಸಿದ್ದಯ್ಯ ಹೊಸ ರಸ್ತೆ, ಚಿಕ್ಕನಾಯನ ಹಳ್ಳಿ.
			೨)	ಕೆ. ಕೃಷ್ಣಯ್ಯ (ಎಸ್ಸಿ) ತಂದೆ ಕರಿಯಪ್ಪ, ಸಾಲಕಟ್ಟೆ, ಎ ಕೆ. ಕಾಲೋನಿ, ಚಿಕ್ಕನಾಯಕನಹಳ್ಳಿ.

೧	೨	೩	೪
		ಹುಲಿಯಾರ್	೧) ಹೆಚ್. ಎಂ. ಜಿಯಉಲ್ಲಾ, ಹುಲಿಯಾರ್, ತುಮಕೂರು ಜಿಲ್ಲೆ.
			೨) ರಂಗಾ ಭೋವಿ (ಎಸ್ಸಿ) ಬೆಳ್ಳಾರ, ತುಮಕೂರು ಜಿಲ್ಲೆ.
		ಪಾವಗಡ	೧) ರಾಮಾಂಜನಪ್ಪ, ತಂದೆ ಜಿ. ಟಿ. ಲಿಂಗಾ ನಾಯಕ್, ಗುಂಡ್ಲಹಳ್ಳಿ, ಪಾವಗಡ ತಾ.
			೨) ಉಗ್ರ ನರಸಿಂಹಪ್ಪ, (ಎಸ್ಸಿ) ತಂದೆ ನಾಗಪ್ಪ, ಪಾವಗಡ, ಪಾವಗಡ ತಾ,
		ತಿಪಟೂರು	೧) ಎಂ. ಎಲ್. ಮಹಾಲಿಂಗೇಗೌಡ, ತಂದೆ ಲಿಂಗೇಗೌಡ, ಮೇಗಲ ಕೊಪ್ಪಲು, ತಿಪಟೂರು ತಾ.
			೨) ತಿಮ್ಮಯ್ಯ, (ಎಸ್ಸಿ) ತಂದೆ ಸಣ್ಣ ಸಿದ್ದೇಗೌಡ. ಗೆದ್ದರೆಹಳ್ಳಿ ಹಟ್ಟಿ ತಿಪಟೂರು ತಾ.
		ಸಿರಾ	೧) ಚಿಕ್ಕಣ್ಣ, ಮಾಜಿ ತಾ, ಅ. ಮಂ. ಸದಸ್ಯರು, ಕಾರೋಹಳ್ಳಿ, ಹುಲಿಕುಂಟೆ ಹೋಬಳಿ, ಸಿರಾ ತಾ. ತುಮಕೂರು ಜಿಲ್ಲೆ.
			೨) ಕುಂಟಯ್ಯ (ಎಸ್ಸಿ) ಬುಕ್ಕಪಟ್ಟಣ, ಸಿರಾ ತಾ. ತುಮಕೂರು ಜಿಲ್ಲೆ,

ಶ್ರೀ ಎಸ್. ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಎ. ಪಿ. ಎಂ. ಸಿ. ಗಳು ಎಂದರೆ ರೈತರ ರಕ್ಷಣೆಗೆ ಬರತಕ್ಕಂಥ ಕಮಿಟಿಗಳು ಹೆಚ್ಚಿನ ಕಮಿಂಟಿಗಳಲ್ಲಿ ರೈತರೇ ಇಲ್ಲ. ಒಂದು ಕಮಿಂಟಿಯಲ್ಲಿ ಇಬ್ಬರು ಸದಸ್ಯರನ್ನು ನಾಮಕರಣ ಮಾಡುವಾಗ ಒಂದೇ ತಾಲ್ಲೂಕಿಗೆ ಸೇರಿದವರನ್ನೇ ಮಾಡಿದ್ದಾರೆ ಎರಡನೇ ತಾಲ್ಲೂಕಿನಿಂದ ಯಾರನ್ನೂ ನೇಮಕ ಮಾಡಿಲ್ಲ ಏಕೆ? ಯಾರು ರೈತರಿದ್ದಾರೆ ಮತ್ತು ರೈತರ ಹಿತಚಿಂತಕರಿದ್ದಾರೆ ಅಂತವರನ್ನು ಈ ಕಮಿಟಿಗಳಿಗೆ ನಾಮಕರಣ ಮಾಡಬೇಕಂ. ಇದನ್ನು ಮಾಡುತ್ತೀರಾ?

ಶ್ರೀ ಆರ್. ಎಲ್. ಜಾಲಪ್ಪ.— ನಾವೇನು ನಾಮಿನೇಟ್ ಮಾಡಿದ್ದೇವೆ. ಅದರಲ್ಲಿ ಶೇಕಡಾ ೯೯ ಭಾಗ ರೈತರೇ ಇದ್ದಾರೆ. ಒಂದೆರಡು ಕಡೆ ಸ್ವಲ್ಪ. ವ್ಯತ್ಯಾಸ ಆಗಿರಬಹಂದು. ಯಾವುದೈ ಕಮಿಟಿಯಲ್ಲಿ ಇಬ್ಬರನ್ನು ನಾಮಿನೇಟ್ ಮಾಡಬೇಕಾದರೆ ಒಬ್ಬರು ಹರಿಜನರು, ಇನ್ನೊಬ್ಬರು ಬೇರೆಯವರು ಇರಬೇಕೆಂದು ಇದೆ. ಒಂದೇ ತಾಲ್ಲೂಕಿಗೆ ಸೇರಿದವರಿಬ್ಬರನ್ನೂ ನಾಮಕರಣ ಮಾಡಬೇಕೆಂದೇನೂ ಇಲ್ಲ. ಕೆಲವು ಕಡೆ ೨—೩ ತಾಲ್ಲೂಕುಗಳು ಸೇರಿದಾಗ ಬೇರೆ ಬೇರೆಯವರಿಗೂ ಕೊಟ್ಟಿದ್ದೂ ಉಂಟಂ ಒಂದೇ ಕಡೆಗೆ ಕೊಟ್ಟಿದ್ದು ಉಂಟು ಇದೇನೂ ಆಕ್ಟ್‌ಗೆ ವಿರುದ್ಧವಾಗಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬಾಗಲಕೋಟೆ ಎ ಪಿ. ಎಂ. ಸಿ. ಯಂ ವ್ಯಾಪ್ತಿಯಲ್ಲಿಬರತಕ್ಕಂಥ ಎಲ್ಲಾ ತಾಲ್ಲೂಕುಗಳಿಗೂ ಸಮಾನವಾದ ಪ್ರಾತಿನಿಧ್ಯ ಕೊಡುತ್ತೀರಾ, ಹೇಗೆ?

ಶ್ರೀ ಆರ್. ಎಲ್. ಜಾಲಪ್ಪ.— ಒಂದು ಕಮಿಟಿಗೆ ೨—೩ ತಾಲ್ಲೂಕುಗಳಂ ಸೇರಿದಾಗ ಅಥವಾ ೪ ತಾಲ್ಲೂಕುಗಳು ಸೇರಿದಾಗ ಎಲ್ಲಾ ಕಡೆಯೂ ಎಲ್ಲಾ ತಾಲ್ಲೂಕುಗಳಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ಏಲ್ಲೋ ಕೆಲವು ಕಡೆ ಹೆಚ್ಚು ಕಡಿಮೆ ಆಗಿರಬಹುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಎರಡಂ ತಾಲ್ಲೂಕು ಮಾಡಿರುವುದನ್ನು ಪುನರ್‌ವಿಮರ್ಶೆ ಮಾಡುತ್ತೀರಾ?

ಶ್ರೀ ಆರ್. ಎಲ್ ಜಾಲಪ್ಪ.— ಈಗ ಮಾಡಿಯಾಗಿದೆ. ಮುಂದೆ ಮಾಡುವಾಗ ಯೋಚನೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.— ಎ. ಪಿ. ಎಂ. ಸಿ. ಗಳಿಗೆ ನಾಮಿನೇಷನ್ ಮಾಡಿದ ಮೇಲೆ ಅದು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಪರಿಣಾಮವನ್ನುಂಟು ಮಾಡಿದೆ. ನಾಮಿನೇಷನ್ ಮಾಡುವಾಗ ತಾವು ಯಾವ ಆಧಾರವನ್ನು ಇಟ್ಟುಕೊಂಡು ಮಾಡಿದ್ದೀರಿ? ಬರೇ ಜನತಾಪಕ್ಷ ಭಾರತೀಯ ಜನತಾಪಕ್ಷ ಮತ್ತು ನಿಮಗೆ ಸಹಕಾರ ಕೊಡತಕ್ಕಂಥ ಪಕ್ಷಗಳನ್ನು ಇಟ್ಟುಕೊಂಡು ಇದನ್ನು ಮಾಡಿದ್ದೀರಿ ಎಂದು ನಾನು ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಆರ್. ಎಲ್. ಜಾಲಪ್ಪ.— ನಾಮಿನೇಷನ್ ಮಾಡಿದ ಮೇಲೆ ಅದು ಎಷ್ಟರ ಮಟ್ಟಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಮೇಲೆ ಪರಿಣಾಮ ಬೀರಿದೆ ಎನ್ನುವುದು ನನಗೆ ಗೊತ್ತಿಲ್ಲ ಎರಡನೆಯದಾಗಿ, ಯಾವ ಆಧಾರದ ಮೇಲೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಇದು ರಾಜಕೀಯ ನಿರ್ಧಾರಗಳನ್ನು ಅವಲಂಬಿಸಿರುತ್ತದೆ. ಎಂದು ಹೇಳಬಯಸುತ್ತೇನೆ. ಆಳುವ ಪಕ್ಷದವರನ್ನು ಹಾಕಿದ ಹಾಗೆಯೇ ಅಲ್ಲಲ್ಲಿ ವಿರೋಧ ಪಕ್ಷದವರನ್ನೂ ನಾಮಿನೇಟ್ ಮಾಡಿದ್ದೇವೆ. ಹಿಂದಿನ ಸರ್ಕಾರದವರೂ ಇದನ್ನು ಮಾಡುತ್ತಿದ್ದರು, ನಾವು ಇನ್ನೂ ಸ್ವಲ್ಪ ಲಿಬರಲ್ ಆಗಿ ಇದನ್ನು ಮಾಡಿದ್ದೇವೆ.

ಶ್ರೀ ಬಿ. ಸ್ವಾಮಿರಾವ್.— ನಾವು ಶಾಸಕರು ಸೂಚಿಸಿದ ಪಟ್ಟಿ ಎಲ್ಲಿ ಹೋಯಿತು?

ಶ್ರೀ ಆರ್. ಎಲ್. ಜಾಲಪ್ಪ.— ಆ ಪಟ್ಟಿಯನ್ನು ಭದ್ರವಾಗಿ ಇಟ್ಟಿದ್ದೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ನಾಮಿನೇಷನ್ ಮಾಡುವಾಗ ವಿರೋಧ ಪಕ್ಷದವರಿಗೂ ಕೂಡ ಪ್ರಾತಿನಿಧ್ಯ ಕೊಡಬೇಕೆಂದು ನಾವು ಅನೇಕ ಅವಕಾಶಗಳನ್ನು ವಿರೋಧ ಪಕ್ಷದವರಿಗೆ ಕೊಟ್ಟಿದ್ದೆವು ಆದೇ ರೀತಿ ನೀವೂ ಕೂಡ ಒಂದು ಹೆಜ್ಜೆ ಮುಂದೆ ಹೋಗಿ ವಿರೋಧಪಕ್ಷದವರ ವಿಶ್ವಾಸ ತೆಗೆದುಕೊಂಡರೆ ಎ. ಪಿ ಎಂ. ಸಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಬಹುದಿಲ್ಲವೆ?

ಅಧ್ಯಕ್ಷರು.— ಇದು ಒಳ್ಳೆಯ ಸಲಹೆ.

ಶ್ರೀ ಆರ್. ಎಲ್. ಜಾಲಪ್ಪ.— ಕೆಲವು ಕಡೆಗಳಲ್ಲಿ ವಿರೋಧ ಪಕ್ಷಕ್ಕೆ ಸೇರಿದವರನೂ ಕೂಡ ನಾಮಿನೇಟ್ ಮಾಡಿದ್ದೇವೆ.

ರಾಜ್ಯದಲ್ಲಿ ಪಾರ್ಥೇನಿಯಂವನ್ನು ನಿರ್ಮೂಲನ ಮಾಡುವುದು.

ಪ್ರ. ೮೮ (೮೪) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸರ್ಕಾರದವರು ಪಾರ್ಥೇನಿಯಂ ನಿರ್ಮೂಲನಕ್ಕಾಗಿ ಇಡೀ ರಾಜ್ಯದಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಪ್ರತ್ಯೇಕ ಕಾರ್ಪೊರೇಷನ್‌ಗಳ ಮೂಲಕ ಮತ್ತು ಸರ್ಕಾರದ ವತಿಯಿಂದ ಖರ್ಚು ಮಾಡಿದ ಹಣವೆಷ್ಟು ?

ಆ) ಈ ನಿರ್ಮೂಲನೆ ನಿಜವಾಗಿಯೂ ಆಗಿದೆಯೇ ; ಹಾಗಿದ್ದಲ್ಲಿ ಎಷ್ಟು ಪ್ರದೇಶದಲ್ಲಿ ಈ ನಿರ್ಮೂಲನೆಯಾಗಿದೆ ?

ಇ) ಪಾರ್ಥೇನಿಯಂ ನಿರ್ಮೂಲನಕ್ಕಾಗಿ ಸರ್ಕಾರದವರು ಹಾಕಿಕೊಂಡಿರುವ ಯೋಜನೆಗಳೇನು ಮತ್ತು ಈ ಬಗ್ಗೆ ಮಿಾಸಲಿರಿಸಿರುವ ಹಣವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು). —

ಅ) ಸರ್ಕಾರದ ವತಿಯಿಂದ ಹಣ ಖರ್ಚು ಮಾಡಿಲ್ಲ. ಕೆಳಕಂಡ ಮಹಾ ನಗರಸಭೆಗಳು ವಿವರಿಸಿದಂತೆ ಹಣ ಖರ್ಚು ಮಾಡಿದ್ದಾರೆ.

೧)	ಬೆಂಗಳೂರು	ರೂ. ೨,೩೪,೧೯೬-೯೩
೨)	ಹುಬ್ಬಳ್ಳಿ-ಧಾರವಾಡ	ರೂ. ೪,೫೦೦-೦೦
೩)	ಬೆಳಗಾವಿ	ರೂ. ೮,೩೯೨-೨೦